**ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ, ಮಂಗಳೂರು**

# ವಿಶ್ವ ಪರಿಸರ ದಿನಾಚರಣೆ 2023

ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಪ್ರಾದೇಶಿಕ ವಿಜ್ಞಾನ ಕೇಂದ್ರದದಲ್ಲಿ ದಿನಾಂಕ 06.06.2023 ರಂದು ವಿಶ್ವ ಪರಿಸರ ದಿನಾಚರಣೆಯ ಪ್ರಯುಕ್ತ ಒಂದು ದಿನದ ಕಾರ್ಯಕ್ರಮವನ್ನು ಬಿಎಎಸ್‌ಎಫ್ ಇಂಡಿಯಾ ಲಿಮಿಟೆಡ್ ಇವರ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾಗಿತ್ತು. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಹಿರಿಯ ಪರಿಸರ ಅಧಿಕಾರಿ ಡಾ. ರವಿ ಇವರು ಉದ್ಘಾಟಕರಾಗಿ, ಬಿಎಎಸ್‌ಎಫ್ ಇಂಡಿಯಾ ಲಿಮಿಟೆಡ್‌ನ ಶ್ರೀ ಶ್ರೀನಿವಾಸ್ ಪ್ರಾಣೇಶ್, ಮುಖ್ಯ ಅತಿಥಿಗಳಾಗಿ, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಅಯುಕ್ತರಾದ ಶ್ರೀ ಅಭಿಷೇಕ್ ವಿ. ಕೆಎಎಸ್, ಅಧ್ಯಕ್ಷತೆ ವಹಿಸಿದ್ದರು. ಶ್ರೀ ಆದಿನಾಥ ಐಆರ್‌ಎಸ್ ಇವರು ಉಪಸ್ಥಿತರಿದ್ದರು. ಜಿಲ್ಲೆಯ ಆಯ್ದ ಪ್ರೌಢ ಶಾಲೆಗಳ ಸುಮಾರು 200 ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರು ಭಾಗವಹಿಸಿದರು.

ಉದ್ಘಾಟಕರು ಹಾಗೂ ಅತಿಥಿಗಳು ಸಸಿಗಳನ್ನು ನೆಡುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ನಂತರ ನಡೆದ ಸಭಾ ಕಾರ್ಯಕ್ರಮದಲ್ಲಿ ಡಾ. ರವಿ ಮಾತಾನಾಡುತ್ತಾ ಪ್ರಕೃತಿ ತನ್ನ ಮೇಲಿನ ದಬ್ಬಾಳಿಕೆಯನ್ನು ಸಾಧ್ಯವಾದಷ್ಟು ಸಹಿಸುತ್ತದೆ, ಆದರೆ ಪ್ರಕೃತಿಯ ತಾಳ್ಮೆಯ ಕಟ್ಟೆಯೊಡೆದರೆ ತನಗೆ ತಾನೆ ಮರುಜನ್ಮ ನೀಡಲು ಕೋವಿಡ್‌ನಂತಹ ಪರಿಸ್ಥಿಯನ್ನು ತಂದೊಡ್ಡುತ್ತದೆ. ಸುನಾಮಿಯಂತಹ ದುರಂತಗಳು ಸಂಭವಿಸಿದಾಗ ನಾವು ಸಮುದ್ರಕ್ಕೆ ಸೇರಿಸಿದ ಪ್ರಾಸ್ಟಿಕನ್ನೆ ತಟಕ್ಕೆ ತಳ್ಳುತ್ತದೆ ಎಂದರು. ಪರಿಸರದ ಸಂಪನ್ಮೂಲಗಳನ್ನು ಸುರಕ್ಷಿತವಾಗಿ ಬಳಸಿ ಮುಂದಿನ ಜನಾಂಗಕ್ಕೆ ಅಷ್ಟೇ ಜತನವಾಗಿ ಬಿಟ್ಟುಕೊಡುವುದು ನಮ್ಮೆಲ್ಲರ ಜವಬ್ದಾರಿಯಗಿದೆ ಎಂದು ಕರೆಯಿತ್ತರು.

ಶ್ರೀ ಶ್ರೀನಿವಾಸ್ ಪ್ರಾಣೇಶ್ ಮಾತಾನಾಡುತ್ತಾ ಪ್ರಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡಿ ಪರ್ಯಾಯ ಮಾರ್ಗಗಳನ್ನು ಕಂಡುಕೊಳ್ಳಬೇಕು. ಪ್ರಾಸ್ಟಿಕ್ ಬ್ಯಾಗ್‌ಗಳ ಬದಲು ಬಟ್ಟೆಯ ಬ್ಯಾಗ್‌ಗಳನ್ನು ಉಪಯೋಗಿಸಿ ಪ್ರಕೃತಿಯನ್ನು ಪ್ರಾಸ್ಟಿಕ್ ಮಾಲಿನ್ಯದಿಂದ ಪಾರುಮಾಡಬೇಕೆಂದರು. ಶ್ರೀ ಅಭಿಷೇಕ್ ವಿ. ಅಧ್ಯಕ್ಷೀಯ ನುಡಿಗಳನ್ನಾಡುತ್ತಾ ಪ್ರಾಸ್ಟಿಕ್ ಬಳಕೆಯಲ್ಲಿ 3ಆರ್ ಸೂತ್ರವಾದ ರೆಡ್ಯುಸ್, ರೀಯೂಸ್ ಮತ್ತು ರಿಸೈಕಲ್‌ಗಳನ್ನು ಅಳವಡಿಸಿಕೊಳ್ಳಬೇಕು, ಶಕ್ತಿಯ ಸಾಂಪ್ರದಾಯಿಕವಲ್ಲದ ಆಕರಗಳ ಬಳಕೆಯನ್ನು ಹೆಚ್ಚಿಸಿ ಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳ ಬಳಕೆಯನ್ನು ನಿಯಂತ್ರಣದಲ್ಲಿಡಬೇಕೆಂದರು.

ನಂತರ ನಡೆದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಲಿಖಿತ ರಸಪ್ರಶ್ನೆ, ಪ್ರಬಂಧ, ಚಿತ್ರಕಲೆ ಮತ್ತು ಆಶುಭಾಷಣ ಸ್ಪರ್ಧೆಯನ್ನು ಏರ್ಪಡಿಸಲಾಯಿತು.

ಕಾರ್ಯಕ್ರಮದ ಕೊನೆಯಲ್ಲಿ ನಡೆದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಹಿರಿಯ ವಿಜ್ಞಾನಿ, ಡಾ. ಸೂರ್ಯ ಎನ್. ಆರ್. ಸ್ಪರ್ಧೆಗಳಲ್ಲಿ ವಿಜೇತರಿಗೆ ಬಹುಮಾನ ಮತ್ತು ಪ್ರಮಾಣ ಪತ್ರಗಳನ್ನು ವಿತರಿಸಿದರು. ಕಾರ್ಯಕ್ರಮವನ್ನು ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರದ ಕ್ಯುರೇಟರ್ ಶ್ರೀ ಜಗನ್ನಾಥ್ ಕಾರ್ಯಕ್ರಮ ನಿರ್ವಹಿಸಿದರು. ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಪ್ರಧಾನ ವಿಜ್ಞಾನಿ ಡಾ. ಹೆಚ್. ಎಸ್. ಶೆಣೈ ಸ್ವಾಗತಿಸಿ, ವೈಜ್ಞಾನಿಕಾಧಿಕಾರಿ ಶ್ರೀ ರಾಮಕೃಷ್ಣ ಮರಾಟೆ ವಂದಿಸಿದರು.

Pilikula Development Authority, Mangalore

# World Environment Day 2023

A one-day program was organized on 06.06.2023 on the occasion of World Environment Day at the Regional Science Centre of Pilikula Development Authority in collaboration with BASF India Limited. Dr. Ravi, Senior Environment Officer, Karnataka State Pollution Control Board inaugurated the event by planting a sapling. Mr. Abhishek V., Commissioner of Pilikula Development Authority presided over the function. Mr. Srinivas Pranesh of BASF India Ltd. and Shri Adinath, IRS were present as the guests. About 200 students and teachers of selected high schools of the district were participated in the event.

While speaking Dr. Ravi said nature endures her oppression as much as possible, but if nature’s patience runs out, it will create a covid-like situation to reincarnate itself. "When disasters like tsunamis occur, the plastics we have added to the sea will be pushed to the surface," he said. He said the responsibility of all of us to use the environment's resources safely and leave them to the next generation.

Shree Srinivas Pranesh said that the use of plastic should be reduced and alternatives should be found. Use cloth bags instead of plastic bags to save nature from plastic pollution. According to the words of the President, Shri Abhishek V. suggested to follow the 3R formula i.e., Reduce, Reuse and Recycle should be adopted to combat plastic pollution; increase the use of non-conventional sources of energy and control the use of conventional energy resources.

Later in the program written quiz, essay, painting and elocution competition were organized for the students.

At the closing ceremony held at the end of the program, the participating students shared their impressions. Prizes and certificates were distributed to the winners of the competitions by Senior Scientist, Dr. Surya N. R. The program was conducted by Mr. Jagannath, Curator of Pilikula Regional Science Centre. Dr. H. S. Shenoy, Principal Scientist of Botany section welcomes the guests and Mr. Ramakrishna Marati, Scientific Officer offered vote of thanks.

ಅತಿಥಿಗಳಿಂದ ಸಸಿ ನೆಡುವುದು





ಅತಿಥಿಗಳಿಂದ ಸಸಿ ನೆಡುವುದು

Planting of saplings by Guest




ಮುಖ್ಯ ಅತಿಥಿಗಳಿಂದ ಭಾಷಣ

Speech by Chief Guest



ಶಾಲೆಗಳಿಗೆ ಗಿಡಗಳ ವಿತರಣೆ

Distribution of saplings to schools